ಫ್ಯಾಕ್ಸ್ / Fax : 080-25586321
ಈಮೇಲ್ / Email : ho@kspcb.gov.in
ವೆಬ್‌ಸೈಟ್ / Website : http://kspcb.gov.in

080-25581383, 25589112
080-25589113, 25589114

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ ರಾಜ್ಯ, ಭಾರತ
"Parisara Bhavan", 1st to 5th Floor, # 49, Church Street, Bangalore - 560 001, Karnataka State, India

ಸಂಖ್ಯೆ: ಮಾನಿಮ/ಆಡಎ/2020-21 37　　　　ದಿನಾಂಕ: 27-04-2020

04 MAY 2020

## ಜ್ಞಾಪನಾ ಪತ್ರ

ವಿಷಯ: ಲಾಕ್‌ಡೌನ್ ಅವಧಿಯಲ್ಲಿ ನವೀಕರಣಗೊಳ್ಳಬೇಕಾಗಿದ್ದ ಚಾಲನ ಸಮ್ಮತಿ ಪತ್ರ ಹಾಗು ಅಧಿಕಾರಿ ಪತ್ರಗಳ ಸಿಂಧೂತ್ವ ಅವಧಿಯನ್ನು ಸ್ವಯಂ ವಿಸ್ತರಣೆಗೊಳಸುವ ಬಗ್ಗೆ .

ಉಲ್ಲೇಖ: ಅರಣ್ಯ. ಜೀವಿಪರಿಸ್ಥಿತಿ ಮತ್ತು ಪರಿಸರ (ಜೀವಿಪರಿಸ್ಥಿತಿ ಮತ್ತು ಪರಿಸರ) ಇಲಾಖೆಯು ಜಲ(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ. 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ. 1981 ಗಳ ಪ್ರಕರಣ 18 ರ ಉಪ-ಪ್ರಕರಣ 1 (ಬಿ) ರ ಅನುಸಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಿನಾಂಕ: 22.4.2020 ರಲ್ಲಿನ ನಿರ್ದೇಶನ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಅರಣ್ಯ. ಜೀವಿಪರಿಸ್ಥಿತಿ ಮತ್ತು ಪರಿಸರ (ಜೀವಿಪರಿಸ್ಥಿತಿ ಮತ್ತು ಪರಿಸರ) ಇಲಾಖೆಯು ಜಲ(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ. 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ಗಳ ಪ್ರಕರಣ 18 ರ ಉಪ-ಪ್ರಕರಣ 1 (ಬಿ) ರ ಅನುಸಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಿನಾಂಕ: 22.4.2020 ರಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ.

1. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಲ(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಅನುಸಾರ ನೀಡಲ್ಪಟ್ಟಿದ್ದು ಮೇಲ್ಕಂಡಂತೆ ಲಾಕ್‌ಡೌನ್ ಅವಧಿಯಲ್ಲಿ ನವೀಕರಣಗೊಳ್ಳಬೇಕಾಗಿದ್ದ ಎಲ್ಲಾ ಚಾಲನಾ ಸಮ್ಮತಿ ಪತ್ರ (ಸಿಎಫ್‌ಓ) ಗಳ ಸಿಂಧುತ್ವ ಅವಧಿಯು ದಿನಾಂಕ: 30.9.2020 ಕ್ಕೆ ಸ್ವಯಂ ವಿಸ್ತರಣೆಗೊಳ್ಳುತ್ತದೆಂದು ಆದೇಶಿಸುವುದು. ಈ ಅವಧಿಯಲ್ಲಿ ಸಂಬಂಧಪಟ್ಟ ಉದ್ದಿಮೆ/ಚಟುವಟಿಕೆಗಳು ಇನ್ನುಳಿದ ಚಾಲ್ತಿಯಲ್ಲಿರುವ ಕಾನೂನಿನ ಅನುಸಾರ ಕಾರ್ಯನಿರ್ವಹಿಸಬಹುದು ಹಾಗೂ ದಿ: 30.09.2020 ರ ನಂತರದ ಅವಧಿಗೆ ನಿಯಮಾನುಸಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರವನ್ನು ನಿಯಮನಾನುಸಾರ ನವೀಕರಿಸಿಕೊಳ್ಳಲು ಅಗತ್ಯ ಕ್ರಮ ವಹಿಸತಕ್ಕದೆಂದು ಸಂಬಂಧಪಟ್ಟವರಿಗೆ ಸೂಚಿಸುವುದು.

2. ಕೊರೋನಾ ವೈರಸ್ (ಕೋವಿಡ್-19) ನಿಂದ ಉಂಟಾಗುವ ಸಾಂಕ್ರಾಮಿಕ ರೋಗದ ತಡೆಗಟ್ಟುವಿಕೆಗೆ ಮತ್ತು ಔಷಧೋಪಚಾರಕ್ಕೆ ಅಗತ್ಯವಾದ ರಾಸಾಯನಿಕ ಮತ್ತು ಔಷಧಿ ತಯಾರಿಕಾ ಘಟಕಗಳು ಕೋರುವ ಅನುಮತಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನಿಯಮಾನುಸಾರ ಪರಿಗಣಿಸಿ ಆದ್ಯತೆಯ ಮೇಲೆ ಮತ್ತು ಕಾಲಮಿತಿಯಲ್ಲಿ ಅಗತ್ಯ ತೀರುವಳಿಗಳನ್ನು/ನಿರಾಕ್ಷೇಪನಾ ಪತ್ರಗಳನ್ನು ನೀಡುವುದು.



Scanned with CamScanner

ಮೇಲ್ಕಂಡ ನಿರ್ದೇಶನಗಳನುಸಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಕೆಳಕಂಡಂತೆ ಆದೇಶಿಸಿದೆ.

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಲ(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಅನುಸಾರ ನೀಡಲ್ಪಟ್ಟಿದ್ದ ಚಾಲನಾ ಸಮ್ಮತಿ ಪತ್ರದ ಸಿಂಧುತ್ವ ಲಾಕ್‌ಡೌನ್ ಅವಧಿಯಲ್ಲಿ ನವೀಕರಣಗೊಳ್ಳಬೇಕಾಗಿದ್ದಲ್ಲಿ ಹಾಗೂ ಈ ಸಂಬಂಧ ಸದರಿ ಅವಧಿಯಲ್ಲಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಇಂತಹ ಚಾಲನಾ ಪತ್ರದ ಅವಧಿಯನ್ನು ದಿನಾಂಕ: 30.9.2020 ರ ಅವಧಿಗೆ ಯಥಾವತ್ತಾದ ಷರತ್ತುಗಳೊಂದಿಗೆ ಸ್ವಯಂ ವಿಸ್ತರಣೆಗೊಳಿಸಲಾಗಿದೆ ಎಂದು ಈ ಮೂಲಕ ಆದೇಶಿಸಿದೆ. ಈ ಅವಧಿಯಲ್ಲಿ ಸಂಬಂಧಪಟ್ಟ ಉದ್ದಿಮೆ/ಚಟುವಟಿಕೆಗಳು ಇನ್ನುಳಿದ ಚಾಲ್ತಿಯಲ್ಲಿರುವ ಕಾನೂನಿನ ಅನುಸಾರ ಕಾರ್ಯನಿರ್ವಹಿಸಬಹುದು ಹಾಗೂ ದಿ: 30.09.2020 ರ ನಂತರದ ಅವಧಿಗೆ ಲಾಕ್‌ಡೌನ ಮುಗಿದ ನಂತರ ನಿಯಮಾನುಸಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರವನ್ನು ನವೀಕರಿಸಿಕೊಳ್ಳಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಮುಂದುವರೆದಂತೆ, ಮಂಡಳಿಯ ಅಧೀನ ಕಛೇರಿಗಳು ಹಾಗು ಕೇಂದ್ರ ಕಛೇರಿಯ ಶಾಖೆಗಳು ಕೊರೋನಾ ವೈರಸ್ (ಕೋವಿಡ್-19) ನಿಂದ ಉಂಟಾಗುವ ಸಾಂಕ್ರಾಮಿಕ ರೋಗದ ತಡೆಗಟ್ಟುವಿಕೆಗೆ ಮತ್ತು ಔಷಧೋಪಚಾರಕ್ಕೆ ಅಗತ್ಯವಾದ ರಾಸಾಯನಿಕ ಮತ್ತು ಔಷಧಿ ತಯಾರಿಕಾ ಘಟಕಗಳು ಕೋರುವ ಅನುಮತಿಗಳ ಅರ್ಜಿಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲು ಕ್ರಮ ವಹಿಸಲು ಸೂಚಿಸಿದೆ.

ಸಹಿ/-
ಸದಸ್ಯ ಕಾರ್ಯದರ್ಶಿ

ಇವರಿಗೆ:

1. ಸಂಬಂಧಪಟ್ಟ ಎಲ್ಲಾ ಕೈಗಾರಿಕೆ /ಚಟುವಟಿಕೆಗಳಿಗೆ

ಪ್ರತಿಯನ್ನು:

1. ಮಾನ್ಯ ಅಧ್ಯಕ್ಷರು, ಕರಾಮಾನಿಮಂ, ಇವರ ಆದ್ಯ ಮಾಹಿತಿಗಾಗಿ.
2. ಎಲ್ಲಾ ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ/ ಎಲ್ಲಾ ಪ್ರಾದೇಶಿಕ ಅಧಿಕಾರಿಗಳ ಮಾಹಿತಿಗಾಗಿ ಮತು ವ್ಯಾಪ್ತಿಯಲಿನ ಕೈಗಾರಿಕೆ / ಚಟುವಟಿಕೆಗಳಿಗೆ ತಪ್ಪದೆ ಪ್ರತಿಯನ್ನು ಕಳುಹಿಸುವುದು ಹಾಗೂ ಹಿಂಬಾಲನಾ ಕ್ರಮ ಕೈಗೊಳ್ಳುವುದು.
3. ಎಲ್ಲಾ ಶಾಖಾ ಮುಖ್ಯಸ್ಥರುಗಳ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
4. ಹಿರಿಯ ಪರಿಸರ ಅಧಿಕಾರಿ, ಇ-ಗರ್ವೆನೆನ್ಸ್ ಕೋಶ ಇವರ ಮಾಹಿತಿಗಾಗಿ ಮತ್ತು ಇದನ್ನು ಮಂಡಳ ವೆಬ್‌ಸೈಟ್ ನಲ್ಲಿ ಪ್ರಕಟಿಸುವುದು.
5. ಕಡತಕ್ಕೆ

ಸದಸ್ಯ ಕಾರ್ಯದರ್ಶಿ

Scanned with CamScanner